# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು

ಡಾ. ಕೆ. ಅನಂತರಾಮು

## 'ನಾನೇ ಅವನು, ನಾನೇ ಅವನು'

ಒಬ್ಬ ಮನುಷ್ಯನು ದುಃಖಕೂಪದಲ್ಲಿ ಬಿದ್ದಿರುವಾಗ, ಪರಮಾತ್ಮ ವಸ್ತುವು ತನ್ನ ಜ್ಯೋತಿಕಿರಣವೊಂದನ್ನು ಅವನೆಡೆಗೆ ಕಳುಹಿಸುತ್ತದೆ. ಆಗ ಆ ಮನುಷ್ಯನು ಎಚ್ಚೆತ್ತುಕೊಂಡು ಮೇಲೆದ್ದುಬಿಡಬೇಕು. ಜೀವನವೆಂಬುದೊಂದು ಕ್ರೀಡಾಭೂಮಿ. ಆಟದಲ್ಲಿ ಎಷ್ಟೇ ಪೆಟ್ಟು ತಿಂದು ಜರ್ಝರಿತನಾಗಿದ್ದರೂ ಎದ್ದುನಿಂತನೆಂದರೆ, ನಾಶವಾಗದೆ ಅಮೃತತ್ತ್ವವನ್ನು ಪಡೆದುಕೊಂಡು ಬಿಡಬಹುದು.

ತಮ್ಮ ದೇಶಸಂಚಾರಕಾಲದಲ್ಲಿ ಸ್ವಾಮಿ ವಿವೇಕಾನಂದರು ಪರಿಪರಿಯಾದ ಸಂಕಟಗಳಿಗೆ ತುತ್ತಾಗುತ್ತಿದ್ದರು. ಒಮ್ಮೆಯಂತೂ ಹಲವು ದಿನಗಳು ಅನ್ನಾಹಾರಗಳಿಲ್ಲದೆ ಕಂಗೆಟ್ಟಿದ್ದರು. ಮುಳ್ಳು ಚುಚ್ಚಿಯೋ, ಕಲ್ಲು ಎಡವಿಯೋ ಕಾಲೆಲ್ಲ ಗಾಯವಾಗಿಬಿಟ್ಟಿತ್ತು. ಸುಸ್ತುಸಂಕಟಗಳಿಂದ, "ಇಲ್ಲಿಂದ ಮುಂದಕ್ಕೆ ಒಂದು ಹೆಜ್ಜೆಯನ್ನೂ ಇಡಲಾರೆ" ಎಂಬ ಸ್ಥಿತಿಯನ್ನು ತಲುಪಿಬಿಟ್ಟರು.

ಆಗ ಆ ದಾರಿಯಲ್ಲಿ ಸಿಕ್ಕಿದ ಯಾವುದೋ ಒಂದು ಮರದ ನೆರಳಿನಲ್ಲಿ 'ಉಸ್ಸಪ್ಪಾ' ಎಂದು ಉರುಳಿಕೊಂಡು ಬಿಟ್ಟರು ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ, ಏನನ್ನೂ ಆಲೋಚಿಸುವ ಸ್ಥಿತಿಯಲ್ಲಿರಲಿಲ್ಲ. ಅವರನ್ನು ಮೇಲೆತ್ತುವವರಾಗಲಿ, ಉಪಚರಿಸುವವರಾಗಲಿ ಆಗ ಅಲ್ಲಿರಲಿಲ್ಲ. ಪ್ರಾಣವಾಯು ಹಾರಿಹೋಗುವಂತಿತ್ತು.

ಆಗ ಇದ್ದಕ್ಕಿದ್ದಂತೆ ಅವರಲ್ಲಿ ಯಾವುದೋ ಚೈತನ್ಯದ ಸಂಚಾರವಾದಂತಾಯಿತು. ಅವರು ಮರುಕ್ಷಣದಲ್ಲಿಯೇ, "ನನಗೆ ಅಂಜಿಕೆಯೆಂಬುದಿಲ್ಲ, ಮರಣವೆಂಬುದಿಲ್ಲ. ನನಗೆ ಹಸಿವು ಬಾಯಾರಿಕೆಗಳಿಲ್ಲ. ಇಡೀ ಪ್ರಕೃತಿಯೇ ನನಗೆ ವಿರುದ್ಧವಾಗಿ ಎದ್ದು ನಿಂತರೂ ನನ್ನನ್ನು ನಾಶಪಡಿಸಲಾರದು. ಅದು ನನಗೆ ಸೇವಕನಾಗಿದೆ. ಹೇ ದೇವದೇವನೇ, ಸರ್ವೇಶ್ವರನೇ, ನಿನ್ನ ಶಕ್ತಿಯನ್ನು ವ್ಯಕ್ತಗೊಳಿಸು, ಮೇಲೆದ್ದು ನಡೆ, ನಿಲ್ಲಬೇಡ, ಹರಿ ಓಂ ತತ್ ಸತ್, ನಾನೇ ಅವನು, ನಾನೇ ಅವನು" ಎಂದು ಮೇಲಿಂದ ಮೇಲೆ ಹೇಳಿಕೊಂಡರು. ಅಷ್ಟಾಗುತ್ತಿದ್ದಂತೆಯೇ ಅವರ ಬಳಲಿಕೆಯೆಲ್ಲವೂ ನೀಗಿ ಅವರ ಶರೀರದಲ್ಲಿ ಅಪೂರ್ವ ಶಕ್ತಿಯ ಸಂಚಾರವಾಯಿತು. ಅಸಹಾಯಕರಾಗಿ ನೆಲಕ್ಕಂಟಿಬಿದ್ದಿದ್ದವರು ಹೊಸಜೀವ ಬಂದಂತಾಗಿ ಮೇಲೆದ್ದು ಮುನ್ನಡೆದರು.

"ನಾವು ಪಾಪಿಗಳು, ಅಂತ್ಯವುಳ್ಳವರು, ಎಂದೋ ಒಂದು ದಿನ ಸತ್ತುಹೋಗುವವರು" ಎಂಬ ಹೀನಭಾವನೆಯನ್ನು ಮನಸ್ಸಿಗೆ ತಂದುಕೊಳ್ಳಬಾರದು. ನಮ್ಮ ಎದುರಿಗಿರುವ ಅಮೃತತ್ತ್ವವನ್ನು ಹೀರುವ ಸಂಕಲ್ಪ ಮಾಡಬೇಕು. 'ಆ ಪರಬ್ರಹ್ಮವು ನಾನೇ' ಎಂಬ ಭಾವನೆ ರಕ್ತಗತ, ಮಾಂಸಗತ, ಅಸ್ಥಿಗತವಾಗಿಬಿಟ್ಟರೆ ಸಾಕು, ದುರ್ಬಲತೆಗಳ ಎಲ್ಲ ಕೆಟ್ಟ ಸ್ವಪ್ನಗಳೂ ಮಾಯವಾಗಿಬಿಡುತ್ತವೆ.

## ಮಹಾರಾಜ ಮತ್ತು ಮೋಚಿ

ಯಾವುದೇ ಕಾರ್ಯವನ್ನಾಗಲಿ ಪ್ರಾಮಾಣಿಕತೆಯಿಂದ ಮಾಡಿದರೆ ಅದರಿಂದ ಸಮಾಜಕ್ಕೆ ಹಿತವಾಗುತ್ತದೆ. ಕನಿಷ್ಠವಾದುದನ್ನೂ ಪರಿಷ್ಕಾರವಾಗಿ ಮಾಡಿದಾಗ ಅದರಿಂದ ಅದ್ಭುತ ಫಲಗಳು ಪ್ರಾಪ್ತವಾಗುತ್ತವೆ. ಹಾಗೆ ಮಾಡಬೇಕಾದರೆ ನಮ್ಮೊಳಗೆ ಭಗವಂತನಿದ್ದಾನೆ ಎಂಬ ಭಾವನೆ ನೆಲೆಯೂರಿರಬೇಕು. ಅದನ್ನೇ ಸಕಲರಿಗೂ ಬೋಧಿಸಬೇಕು. ಒಬ್ಬ ಬೆಸ್ತನಿಗೆ "ನನ್ನೊಳಗೆ ದೇವರಿದ್ದಾನೆ" ಎಂಬ ಭಾವನೆ ನೆಲೆಯೂರಿರಬೇಕು. ಅದನ್ನೇ ಸಕಲರಿಗೂ ಬೋಧಿಸಬೇಕು. ಒಬ್ಬ ಬೆಸ್ತನು ನನ್ನೊಳಗೆ ದೇವರಿದ್ದಾನೆ ಎಂದು ಭಾವಿಸಿದರೆ ಅವನು ಉತ್ತಮವಾದ ಬೆಸ್ತನಾಗುತ್ತಾನೆ. ಒಬ್ಬ ವಿದ್ಯಾರ್ಥಿಯು ನನ್ನೊಳಗೆ ದೇವರಿದ್ದಾನೆ ಎಂದು ಭಾವಿಸಿದರೆ ಅವನು ಉತ್ತಮ ವಿದ್ಯಾರ್ಥಿಯಾಗುತ್ತಾನೆ. ಒಬ್ಬ ವಕೀಲನು ನನ್ನೊಳಗೆ ದೇವರಿದ್ದಾನೆ ಎಂದು ಭಾವಿಸಿದರೆ ಅವನು ಉತ್ತಮ ವಕೀಲನಾಗುತ್ತಾನೆ. ಈ ಹಿನ್ನೆಲೆಯಲ್ಲಿ ಜಾತಿಗಳು ಉಳಿದರೂ ಅದರಿಂದ ಸಮಾಜಕ್ಕೆ ಕೇಡಾಗುವುದಿಲ್ಲ. ಅದು ಎಲ್ಲರೂ ಮುಕ್ತಿ ಸಾಧಿಸಲು ದಾರಿ ತೋರಿಸುತ್ತದೆ.

ಒಬ್ಬ ದೊರೆಯ ಆಸ್ಥಾನದಲ್ಲಿ ಒಂದು ದಿನ, ರಾಜ್ಯಭಾರ ಮಾಡುವ ದೊರೆಯು ಶ್ರೇಷ್ಠನೋ ಪಾದರಕ್ಷೆಯನ್ನು ಹೊಲಿಯುವ ಮೋಚಿಯು ಶ್ರೇಷ್ಠನೋ ಎಂಬ ವಿಚಾರ ಚರ್ಚೆಗೆ ಬಂದಿತು. ಒಬ್ಬ ಮೋಚಿಯೂ ಆಗ ಆಸ್ಥಾನದಲ್ಲಿದ್ದನು. ರಾಜನ ಪರವಾಗಿ ಮಂತ್ರಿಯು ವಾದ ಮಾಡುತ್ತ, "ದೊಡ್ಡದೊಂದು ರಾಜ್ಯವನ್ನು ನಮ್ಮ ದೊರೆಗಳು ಆಳುತ್ತಾರೆ; ಮೋಚಿಯಿಂದ ಆ ಕೆಲಸ ಆಗಲಾರದು. ಆದ್ದರಿಂದ ನಮ್ಮ ಮಹಾರಾಜರೇ ಶ್ರೇಷ್ಠರು" ಎಂದು ಪ್ರತಿಪಾದಿಸಿದನು. ಆಮೇಲೆ ಮೋಚಿಗೂ ತನ್ನ ಅಭಿಪ್ರಾಯವನ್ನು ಮಂಡಿಸುವ ಅವಕಾಶ ಕೊಡಲಾಯಿತು. ಆಗ ಮೋಚಿಯು, "ನಾನು ಸುಂದರವಾದ ಪಾದರಕ್ಷೆಗಳನ್ನು ತಯಾರಿಸುತ್ತೇನೆ, ನಾನು ರಾಜ್ಯಭಾರ ಮಾಡಲಾರೆನೆಂಬುದು ಸರಿಯಾಗಿದೆ. ಆದರೆ ನಮ್ಮ ಮಹಾರಾಜರು ನನ್ನ ಹಾಗೆ ಆಕರ್ಷಕವಾದ ಪಾದರಕ್ಷೆಗಳನ್ನು ಹೊಲಿಯಬಲ್ಲರೇ ಎಂಬುದನ್ನು ತಿಳಿಯಬಯಸುತ್ತೇನೆ" ಎಂದನು. ಆಗ ದೊರೆಯೇ ನಡುವೆ ಬಾಯಿಹಾಕಿ, "ಇಲ್ಲಪ್ಪಾ, ನಿಜವಾಗಿಯೂ ನನಗೆ ಪಾದರಕ್ಷೆ ಹೊಲಿಯಲು ಬರುವುದಿಲ್ಲ" ಎಂದನು. ಈ ಚರ್ಚೆಯ ಹಿನ್ನೆಲೆಯಲ್ಲಿ ಕೊನೆಗೆ, "ಜಾತಿಯೆಂಬುದು ಪ್ರಕೃತಿ ನಿರ್ಮಿತವಾದುದು. ಆದರಿಂದ ಯಾರೂ ತಪ್ಪಿಸಿಕೊಳ್ಳುವುದು

ಸಾಧ್ಯವಿಲ್ಲ. ನಾವು ಸಮಾಜದಲ್ಲಿ ಬೇರೆ ಬೇರೆ ಕರ್ತವ್ಯಗಳನ್ನು ನಿರ್ವಹಿಸುವವರಾಗಿದ್ದೇವೆ. ಹಾಗೆ ನಿರ್ವಹಿಸುವಾಗ ರಾಜ್ಯಭಾರ ಮಾಡುವವನು ಹೆಚ್ಚಿನವನೆಂದಾಗಲಿ, ಪಾದರಕ್ಷೆ ಹೊಲಿಯುವವನು ಕಡಿಮೆಯವನೆಂದಾಗಲಿ ಭಾವಿಸುವುದು ತರವಲ್ಲ" ಎಂಬ ತೀರ್ಮಾನವು ಹೊರಹೊಮ್ಮಿತು.

ದೇವರು ಪ್ರತಿಯೊಬ್ಬರಲ್ಲಿಯೂ ಸಮಾನವಾಗಿ ಇದ್ದಾನೆಂದಾದ ಮೇಲೆ ಎಲ್ಲರಿಗೂ ಸರಿಸಮಾನವಾದ ಹಕ್ಕುಗಳು ಪ್ರಾಪ್ತವಾಗಬೇಕು. ಪ್ರತ್ಯೇಕ ಹಕ್ಕು ಯಾರಿಗೂ ಇಲ್ಲ.

"ನಿನ್ನಲ್ಲಿರುವಂತೆಯೇ ದೇವರು ನನ್ನಲ್ಲಿಯೂ ಇದ್ದಾನೆ. ಆದ್ದರಿಂದ ನಾವಿಬ್ಬರೂ ಸಮಾನರು" ಎಂದು ಯಾರಾದರೂ ಹೇಳಿದರೆ ಅದನ್ನು ಒಪ್ಪಿಕೊಳ್ಳಲೇಬೇಕು ಎಂಬುದರಲ್ಲಿ ಎರಡು ಮಾತಿಲ್ಲ.

## ಏಕತೆ ಮತ್ತು ವಿವಿಧತೆ

ಏಕತೆ ಮತ್ತು ವಿವಿಧತೆಗಳ ನಡುವೆ ಯಾವುದು ಸತ್ಯ ಎಂಬುದು ಅತ್ಯಂತ ಪುರಾತನವಾದ ಪ್ರಶ್ನೆ. "ಏಕತೆಯೆಂಬುದೇ ಸತ್ಯ, ವಿವಿಧತೆಯು ಭ್ರಾಂತಿ, ಏಕತೆಯ ಕಡೆಗೆ ಹೋಗಿ" ಎಂಬುದು ಒಂದು ವಾದವಾದರೆ, "ಏಕತೆಯನ್ನು ಆಶಿಸಬೇಡಿ, ಅದೊಂದು ಭ್ರಾಂತಿ, ವೈವಿಧ್ಯದ ಕಡೆಗೆ ಹೋಗಿ" ಎಂಬುದು ಇನ್ನೊಂದು ವಾದವಾಗಿದೆ. ಮ್ಯಾಕ್ಸ್‌ಮುಲ್ಲರ್ ಎಂಬ ತತ್ತ್ವಜ್ಞಾನಿಯು ಬರೆದಿರುವ ಕಥೆಯೊಂದನ್ನು ಸ್ವಾಮಿ ವಿವೇಕಾನಂದರು ನೆನಪಿಸಿಕೊಳ್ಳುತ್ತ, ಈ ಎರಡೂ ಪಕ್ಷಗಳನ್ನು ಸಮನ್ವಯಗೊಳಿಸಿದ್ದಾರೆ.

ಒಂದು ದಿನ ಒಬ್ಬ ಬ್ರಾಹ್ಮಣನು ಗ್ರೀಸ್ ದೇಶದ ತತ್ತ್ವಜ್ಞಾನಿಯಾದ ಸಾಕ್ರಟೀಸನೊಡನೆ ವಿಚಾರ ವಿನಿಮಯ ನಡೆಸಲೆಂದು ಹೋದನು. ಮೊದಲಿಗೆ ಆ ಬ್ರಾಹ್ಮಣನು ಸಾಕ್ರಟೀಸನನ್ನು ಉದ್ದೇಶಿಸಿ, "ಜ್ಞಾನದ ಪರಮಗುರಿ ಯಾವುದು, ಮಹಾಶಯರೇ?" ಎಂದು ಕೇಳಿದನು. ಅದಕ್ಕೆ ಸಾಕ್ರಟೀಸನು "ನಾವು ಮನುಷ್ಯನನ್ನು ತಿಳಿದುಕೊಳ್ಳಬೇಕೆಂದು ಬಯಸುತ್ತೇವೆ. ಹಾಗೆ ಮನುಷ್ಯನನ್ನು ಅರಿಯುವುದೇ ಎಲ್ಲ ಜ್ಞಾನದ ಪರಮಗುರಿ" ಎಂದನು. ಅದಕ್ಕೆ ಬ್ರಾಹ್ಮಣನು, "ಆಗಲಿ, ಈ ವಿಚಾರವು ಯೋಗ್ಯವಾಗಿದೆ" ಎಂದನು. ಆ ಬಳಿಕ ಸಾಕ್ರಟೀಸನು "ಈ ವಿಚಾರದಲ್ಲಿ ನಿಮ್ಮ ಅಭಿಪ್ರಾಯ ವೇನು, ಸ್ವಾಮಿ?" ಎಂದು ಕೇಳಿದನು. ಅದಕ್ಕೆ ಬ್ರಾಹ್ಮಣನು "ನಾವು ಸನಾತನಧರ್ಮ ಸಂಪ್ರದಾಯಕ್ಕೆ ಸೇರಿದವರು. ನಾವು ದೇವರನ್ನು ತಿಳಿದುಕೊಳ್ಳಬೇಕೆಂದು ಹಂಬಲಿಸುತ್ತೇವೆ. ಮನುಷ್ಯನು ದೇವರ ಸೃಷ್ಟಿಯಾದ್ದರಿಂದ, ದೇವರನ್ನು ಅರಿಯದೆ ಮನುಷ್ಯನನ್ನು ಅರಿಯುವುದು ಹೇಗೆ ಸಾಧ್ಯ? ದೇವರನ್ನು ಅರಿಯುವುದೇ ಎಲ್ಲ ಜ್ಞಾನದ ಪರಮಗುರಿ" ಎಂದು ತನ್ನ ಅಭಿಪ್ರಾಯವನ್ನು ಹೇಳಿದನು. ಅದಕ್ಕೆ ಸಾಕ್ರಟೀಸನು "ಆಗಲಿ, ನಿಮ್ಮ ವಿಚಾರವೂ ಮನನಯೋಗ್ಯವಾಗಿದೆ" ಎಂದನು.

ಈ ಕಥೆಯ ಮುಕ್ತಾಯದಲ್ಲಿ ವಿವೇಕಾನಂದರು, "ಒಬ್ಬರು ಪ್ರಕೃತಿಯಲ್ಲಿ ದೇವರನ್ನು ನೋಡುತ್ತಾರೆ, ಮತ್ತೊಬ್ಬರು ದೇವರಲ್ಲಿ ಪ್ರಕೃತಿಯನ್ನು ನೋಡುತ್ತಾರೆ. ಸದ್ಯಕ್ಕೆ ನಾವು ಈ ಎರಡೂ ಪಕ್ಷಗಳನ್ನು ನಿಷ್ಪಕ್ಷಪಾತದಿಂದ ನೋಡುವ ಸ್ಥಿತಿಯಲ್ಲಿದ್ದೇವೆ. 'ಜೀವನ' ಎಂಬುದು ಇರಬೇಕಾದರೆ, 'ವೈವಿಧ್ಯ' ಎಂಬುದೂ ಇದ್ದೇ ತೀರಬೇಕು. ಮಾನವನನ್ನು ಅರಿತರೆ ಮಾತ್ರ ದೇವರನ್ನು ಅರಿಯಬಹುದು ಎಂಬುದು ಎಷ್ಟು ಸತ್ಯವೋ, ದೇವರನ್ನು ಅರಿತರೆ ಮಾತ್ರ ಮಾನವನನ್ನು ಅರಿಯಬಹುದು ಎಂಬುದು ಕೂಡ ಅಷ್ಟೇ ಸತ್ಯ. ಮೇಲ್ನೋಟಕ್ಕೆ ವಿರೋಧಾಭಾಸವೆಂಬಂತೆ ಕಂಡುಬಂದರೂ ಇವೆರಡೂ ಮಾನವನ ಸ್ವಭಾವಕ್ಕೆ ಪೂರಕವಾಗಿವೆ. ಇಡೀ ಬ್ರಹ್ಮಾಂಡವೇ ವಿವಿಧತೆಯಲ್ಲಿ ಏಕತೆಯನ್ನೂ, ಏಕತೆಯಲ್ಲಿ ವಿವಿಧತೆಯನ್ನೂ ತೋರ್ಪಡಿಸುವ ಲೀಲಾಭೂಮಿಯಾಗಿದೆ" ಎಂದು ಮನೋಜ್ಞವಾಗಿ ಬಣ್ಣಿಸಿದ್ದಾರೆ.

## ನದಿಯನ್ನು ದಾಟುವುದು ಹೇಗೆ?

'ಮಾಯೆ' ಎಂಬುದು ಒಂದು ಸಿದ್ಧಾಂತವಲ್ಲ. ಜಗತ್ತು ಹೇಗೆ ನಡೆಯುತ್ತಿದೆಯೋ, ಹಾಗೆಯೇ ಅದನ್ನು ವಿವರಿಸಿ ಹೇಳುವುದೇ ಮಾಯೆ. ಅರಿತೋ ಅರಿಯದೆಯೋ ಮನುಷ್ಯನು ತಾನು ಸಂಕೋಲೆಗಳಿಂದ ಬದ್ಧನಾಗಿದ್ದೇನೆಂದು ಭಾವಿಸಿಕೊಂಡಿದ್ದಾನೆ. ತಾನು ಏನಾಗಬೇಕೆಂದು ಬಯಸುತ್ತಿದ್ದಾನೆಯೋ, ಅವನು ಅದಾಗಿಲ್ಲ. ಅದಕ್ಕೆಲ್ಲ ಮಾಯೆಯೇ ಕಾರಣ. ಅದು ಎಲ್ಲೆಲ್ಲಿಯೂ ಹರಡಿಕೊಂಡಿದೆ, ಭಯಂಕರವೂ ಆಗಿದೆ. ಆದರೂ ನಾವು ಅದರ ಮೂಲಕವೇ ಕೆಲಸಮಾಡಬೇಕಾಗಿದೆ.

ಯುವಕನೊಬ್ಬನು ಗಂಗಾನದಿಯ ತೀರದಲ್ಲಿ ಪ್ರವಾಹವನ್ನೇ ದಿಟ್ಟಿಸುತ್ತಾ ಮೌನವಾಗಿ ಕುಳಿತಿದ್ದನು. ಹಾಗೆಯೇ ಅದೆಷ್ಟೋಹೊತ್ತು ಕಳೆದುಹೋಯಿತು. ಈ ನಡುವೆ ಯಾವಾಗಲೋ ಅವನ ಪರಿಚಿತನೊಬ್ಬನು ಅಲ್ಲಿಗೆ ಬಂದನು. "ಏನಯ್ಯಾ, ನದಿಯ ತೀರ ದಲ್ಲಿ ಹೀಗೆ ಆಲೋಚನಾಪರನಾಗಿ ಕುಳಿತಿದ್ದೀಯಲ್ಲಾ, ಏನು ಸಮಾಚಾರ" ಎಂದು ಕೇಳಿದನು. ಅದಕ್ಕವನು, "ನದಿಯನ್ನು ದಾಟಿ ಹೋಗಬೇಕಾಗಿದೆ, ಅದಕ್ಕೆ ಕುಳಿತಿದ್ದೇನೆ" ಎಂದನು. ಪರಿಚಿತನಿಗೆ ಅಚ್ಚರಿಯಾಯಿತು. "ಕುಳಿತುಕೊಂಡೇ ಇದ್ದರೆ ನದಿಯನ್ನು ದಾಟುವುದು ಹೇಗೆ ನೀರಿಗಿಳಿಯಬೇಡವೇ?" ಎಂದು ಕೇಳಿದನು. ಅದಕ್ಕವನು, "ನದಿಯ ನೀರೆಲ್ಲ ಹರಿದು ಬರಿದಾಗಿಬಿಡಲಿ ಎಂದು ಕಾಯುತ್ತಿದ್ದೇನೆ, ಆಮೇಲೆ ದಾಟುತ್ತೇನೆ" ಎಂದು ಹೇಳಿ ಅಚ್ಚರಿಮೂಡಿಸಿದನು.

ಆ ಯುವಕನೇ ನಾವು. "ಪ್ರಪಂಚವೆಲ್ಲ ಹಸನಾದ ಮೇಲೆ ನಾನು ಕಾರ್ಯಪ್ರವೃತ್ತನಾಗುತ್ತೇನೆ, ಆನಂದವನ್ನು ಆಸ್ವಾದಿಸುತ್ತೇನೆ" ಎಂದು ಹೇಳುವವನು ಮಾಯೆಗೆ ದಾಸನಾಗಿ ನಡೆಯುವವನಾಗುತ್ತಾನೆ. ಮಾಯೆಯನ್ನು ಅತಿಕ್ರಮಿಸಿ ಸಾಗಬೇಕಾಗಿದೆ. ಪ್ರಕೃತಿಯು ಮನುಷ್ಯ ನನ್ನು, "ನೀನು ಕಾಡಿನಲ್ಲಿ ವಾಸಮಾಡು" ಎಂದಿತು. ಆಗ ಮನುಷ್ಯನು, "ನಾನೇಕೆ ಕಾಡಿನಲ್ಲಿ ವಾಸಮಾಡಲಿ, ಮನೆಕಟ್ಟಿಕೊಂಡು ಊರಿನಲ್ಲಿರುತ್ತೇನೆ" ಎಂದು ಪ್ರಕೃತಿಯನ್ನು ಎದುರಿಸಿದನು. ಇತಿಹಾಸವೆಲ್ಲವೂ ಮಾನವನು ಪ್ರಕೃತಿಯೊಡನೆ ಹೋರಾಡಿ ಜಯಶೀಲನಾಗಿರುವುದರ ವರ್ಣನೆಯೇ ಆಗಿದೆ. ಪ್ರಕೃತಿಯನ್ನು ಭೇದಿಸಿ ಸ್ವಾತಂತ್ರ್ಯದ ಹಾದಿಯನ್ನು ಕಂಡುಕೊಳ್ಳಬೇಕಾಗಿದೆ. ನೀರೆಲ್ಲ ಬರಿದಾಗಲೆಂದು ಕಾಯುತ್ತ ಕುಳಿತರೆ ದಾಟುವುದುಂಟೆ!